2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 13/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಹೇಮಂತಕುಮಾರ | ಪಿಡಬ್ಲೂ - 10 | |
| ತಂದೆಯ ಹೆಸರು | - ಲಕ್ಷ್ಮಣಪ್ಪ | ಸಿಡಬ್ಲೂ - 14 | |
| ವಯಸ್ಸು | - 25 ವರ್ಷ | | |
| ಉದ್ಯೋಗ | - ಎಲೆಕ್ಟ್ರಿಶಿಯನ್ ಕೆಲಸ | | |
| ವಾಸ ಸ್ಥಳ | - ಮಡಿವಾಳರ ಬೀದಿ, ಕಡೂರು | | |

ದಿನಾಂಕಃ **21.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಆರೋಪಿತನ ಪರಿಚಯ ಇದೆ. ಆತ ನಮ್ಮ ನೆರೆಹೊರೆಯವನು. ಚಾಸಾ.1 ಮತ್ತು 9 ರವರ ಪರಿಚಯ ಇಲ್ಲ. ಚಾಸಾ.16 ರವರ ಪರಿಚಯ ಇಲ್ಲ. ಮೃತ ಮಗು ಲೋಲಾಕ್ಷಿ ಗೊತ್ತಿಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರಲ್ಲಿ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

2. ದಿಃ 26.09.2020 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ನಾನು ಆರೋಪಿ ಹಾಗೂ ಚಾಸಾ.1 ರವರು ಮದುವೆಯಾಗಿ ನಮ್ಮ ಎದುರಿನ ಮನೆಯಲ್ಲಿ ವಾಸವಿದ್ದು ಅವರ ಮದ್ಯೆ ಆಗಾಗ ಜಗಳವಾಗುತ್ತಿದ್ದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ದಿಃ 10.09.2020 ರಂದು ಮದ್ಯಾಹ್ನ 1.00 ಗಂಟೆ ಸುಮಾರಿಗೆ ನಾನು ಮನೆಯ ಒಳಗೆ ಇದ್ದಾಗ ಜೋರಾಗಿ ಕಿರುಚುವ ಶಬ್ದ ಕೇಳಿ ನಾನು ಮನೆಯಿಂದ ಹೊರಗೆ ಬಂದು

ನೋಡಿದಾಗ ನನ್ನ ಅಕ್ಕಪಕ್ದ ಮನೆಯವರು ಚಾಸಾ.1 ರವರ ಮನೆಯ ಕಡೆಗೆ ಓಡಿಹೋಗಿದ್ದನ್ನು ನೋಡಿ ನಾನು ಸಹ ಅಲ್ಲಿಗೆ ಹೋಗಿ ನೋಡಿದಾಗ ಚಾಸಾ.1 ಮತ್ತು ಆರೋಪಿತನ ಮಗಳಾದ ಮಗು ಲೋಲಾಕ್ಷಿಯನ್ನು ಅಲ್ಲಿದ್ದವರು ಎತ್ತಿ ಬೆನ್ನು ಮತ್ತು ಎದೆಯನ್ನು ಒತ್ತುತ್ತಿದ್ದರು, ಚಾಸಾ.9 ರವರಿಗೆ ನಾವು ಏನಾಯಿತು ಎಂದು ಕೇಳಿದಾಗ ಆರೋಪಿತನು ಮಗುವನ್ನು ಬಕೆಟ್ ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿರುತ್ತಾನೆಂದು ತಿಳಿಸಿರುತ್ತಾರೆಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ26.09.2020 ರಂದು ಈಗ ಓದಿ ಹೇಳಿದ ನಿಪಿ.23 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

3. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿ ಪರವಾಗಿಃ</u>

4. ಇಲ್ಲ

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ